# ಸ್ಪೀಕರ್‌ಗೆ ಗವರ್ನರ್ ನಿರ್ದೇಶಿಸುವಂತಿಲ್ಲ

■ ಸಂದೀಪ್ ಪಾಟೀಲ್



ಕರ್ನಾಟಕದ ವಿಧಾನಸಭೆ ಸ್ಪೀಕರ್ ಕೆ. ಆರ್. ರಮೇಶ್ ಕುಮಾರ್ ಅವರಿಗೆ ಸದನದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಸಂದೇಶ ಕಳುಹಿಸುವ ಅಧಿಕಾರ ರಾಜ್ಯಪಾಲ ವಜೂಭಾಯಿ ವಾಲ ಅವರಿಗೆ ಇದೆ. ಸಂವಿಧಾನದ 175(2)ನೇ ವಿಧಿ(ಆರ್ಟಿಕಲ್) ಅಡಿ, ಸದನದಲ್ಲಿ ಇತ್ಯರ್ಥವಾಗದೇ ಉಳಿದಿರುವ ವಿಧೇಯಕಗಳು, ಗೊತ್ತುವಳಿಗಳಿಗೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳಿ ಎಂದು ರಾಜ್ಯಪಾಲರು ಸ್ಪೀಕರ್‌ಗೆ ಸೂಚಿಸಬಹುದು. ಇಂಥಾ ಸಂದೇಶದಲ್ಲಿರುವ ಅಗತ್ಯ ಸಂಗತಿಗಳನ್ನು ಸ್ಪೀಕರ್ ಪರಿಗಣಿಸಬಹುದು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ರಾಜ್ಯಪಾಲರು ಸ್ಪೀಕರ್ ಅವರಿಗೆ ನಿರ್ದೇಶನ ನೀಡಲು ಬರುವುದಿಲ್ಲ. ಬದಲು ಮನವಿ ರೂಪದ ಸಂದೇಶ ಕಳುಹಿಸಬಹುದಷ್ಟೆ. ಹಾಗಾಗಿ, ಕರ್ನಾಟಕದ ರಾಜ್ಯಪಾಲರು ಸಂದೇಶ ಕಳುಹಿಸಿರುವುದು ಔಚಿತ್ಯವಾಗಿದೆ. ಅದನ್ನು ಸ್ಪೀಕರ್ ಪಾಲಿಸಬಹುದು. ಪಾಲಿಸದೇ ಇರಲೂಬಹುದು.

**ಕಾನೂನು ವಿಶ್ಲೇಷಣೆ**

ಆದರೆ, ಇದೇ ಮಾತನ್ನು ರಾಜ್ಯಪಾಲರು ಮುಖ್ಯಮಂತ್ರಿಗೆ ನೀಡಿರುವ ನಿರ್ದೇಶನಕ್ಕೆ ಅನ್ವಯಿಸಲು ಬರುವುದಿಲ್ಲ.ಸಂವಿಧಾನದ 163ನೇ ವಿಧಿ ಅನ್ವಯ ರಾಜ್ಯಪಾಲರೊಬ್ಬರು ಮುಖ್ಯಮಂತ್ರಿ ಇಲ್ಲವೇ ಮುಖ್ಯಮಂತ್ರಿ ನೇತೃತ್ವದ ಸಂಪುಟಕ್ಕೆ ಯಾವುದೇ ರೀತಿಯ ನಿರ್ದೇಶನ ನೀಡುವ ಪರಮಾಧಿಕಾರ ಹೊಂದಿದ್ದಾರೆ. ಚುನಾಯಿತ ಸರಕಾರವೊಂದು ಬಹುಮತ ಕಳೆದುಕೊಂಡಿದೆ ಎಂಬುದು ಯಾವುದೇ ಮೂಲದಿಂದ ಮನವರಿಕೆಯಾದರೂ,ಅದನ್ನು ವಿಶ್ವಾಸಮತದ ಪರೀಕ್ಷೆಗೆ ಒಡ್ಡುವ ಅಧಿಕಾರ ರಾಜ್ಯಪಾಲರಿಗೆ ಇದೆ. ಆಗ ಅವರು ಸರಕಾರದ ನೇತೃತ್ವ ವಹಿಸಿರುವ ಮುಖ್ಯಮಂತ್ರಿಯನ್ನು ಕರೆದು, ನೀವು ನಿರ್ದಿಷ್ಟ ಅವಧಿಯೊಳಗೆ ವಿಶ್ವಾಸಮತ ಸಾಬೀತು ಪಡಿಸಿ ಎಂದು ನಿರ್ದೇಶನ ನೀಡಬಹುದು. ಈ ಅಧಿಕಾರವನ್ನೇ ಕರ್ನಾಟಕದ ರಾಜ್ಯಪಾಲರು ಸದ್ಯ ಬಳಸಿದ್ದಾರೆ. 15 ಜನ ಶಾಸಕರು ಈ ಸರಕಾರದ ವಿರುದ್ಧ ತಾವಿರುವುದಾಗಿ ಘೋಷಿಸಿ, ಸ್ಪೀಕರ್ ಅವರಿಗೆ ರಾಜೀನಾಮೆ ಸಲ್ಲಿಸಿರುವುದಾಗ ರಾಜ್ಯಪಾಲರಿಗೆ ಮಾಹಿತಿ ನೀಡಿದ್ದಾರೆ. ಅವರ ರಾಜೀನಾಮೆಯನ್ನು ಸ್ಪೀಕರ್ ಅಂಗೀಕರಿಸುವರೋ, ಬಿಡುವರೋ ಎಂಬುದು ಬೇರೆ ಮಾತು. ಅದು ಅವರಿಗೆ ಸಂಬಂಧಿಸಿದ ವಿಷಯವಷ್ಟೆ. ಒಟ್ಟಾರೆ ಈ ಪ್ರಕ್ರಿಯೆ ಮೂಲಕ, ಸರಕಾರಕ್ಕೆ ಅಗತ್ಯ ಬಹುಮತವಿಲ್ಲ ಎಂಬ ಮಾಹಿತಿ ರಾಜ್ಯಪಾಲರಿಗೆ ದೊರೆತಿದೆ. ಹಾಗಾಗಿ ಅವರು ಕುಮಾರಸ್ವಾಮಿ ಅವರಿಗೆ ಬಹುಮತ ಸಾಬೀತು ಪಡಿಸಿ ಎಂದು ನಿರ್ದೇಶನ ನೀಡಿದ್ದಾರೆ. ಬಹುಮತ ಸಾಬೀತಿಗೆ ಸಮಯ ನಿಗದಿಪಡಿಸುವ ಅಧಿಕಾರವೂ ಅವರಿಗೆ ಇದೆ. ಇಷ್ಟೇ ಸಮಯದಲ್ಲಿ ವಿಶ್ವಾಸಮತ ಯಾಚನೆ ಪ್ರಕ್ರಿಯೆ ಕೈಗೆತ್ತಿಕೊಳ್ಳಿ ಎಂದು ರಾಜ್ಯಪಾಲರು ಸ್ಪೀಕರ್‌ಗೆ ನಿರ್ದೇಶನ ಮಾಡಲು ಬರುವುದಿಲ್ಲ. ಆದರೆ, ಸಮಯದ ಗಡುವನ್ನು ಸಿಎಂಗೆ ಸೂಚಿಸಬಹುದು. ಮುಖ್ಯಮಂತ್ರಿಯೇ ಸ್ವಯಂಪ್ರೇರಣೆಯಿಂದ ವಿಶ್ವಾಸದ ಗೊತ್ತುವಳಿ ಮಂಡಿಸಿರುವುದರಿಂದ ಈ ಹಂತದಲ್ಲಿ ರಾಜ್ಯಪಾಲರಿಗೆ ಸಮಯ ನಿಗದಿ ಪಡಿಸುವ ಅಧಿಕಾರವಿಲ್ಲ ಎಂಬ ವಾದಗಳಿಗೆ ಅರ್ಥವಿಲ್ಲ. ಅಲ್ಪಮತಕ್ಕೆ ಸರಕಾರ ಕುಸಿದಿದೆ ಎಂಬುದು ಮನವರಿಕೆಯಾದರೆ, ರಾಜ್ಯಪಾಲರು ಯಾವುದೇ ಹಂತದಲ್ಲೂ ಸಿಎಂಗೆ ಸೂಚನೆ ನೀಡಬಹುದು. ಅದು ಅವರಿಗೆ ದತ್ತ ಅಧಿಕಾರ. ಆ ಕೆಲಸವನ್ನು ಅವರು ಮಾಡಿದ್ದಾರೆ. ಈಗ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ವಿಶ್ವಾಸಮತವನ್ನು ಸಾಬೀತುಪಡಿಸಬೇಕು. ಹಾಗೆ ನೋಡಿದರೆ, ಹಿಂದೆಲ್ಲಾ ಬಹುಮತ ಕಳೆದುಕೊಂಡು ಅನೇಕ ಚುನಾಯಿತ ಸರಕಾರಗಳನ್ನು ರಾಜ್ಯಪಾಲರು ವಿಶ್ವಾಸ ಮತಯಾಚನೆಗೂ ಅವಕಾಶ ನೀಡದೇ ವಜಾ ಮಾಡಿರುವ ಪ್ರಕರಣಗಳು ಬಹಳಷ್ಟಿವೆ. ಎಸ್. ಆರ್. ಬೊಮ್ಮಾಯಿ ಪ್ರಕರಣದಲ್ಲಿ ವಿಶ್ವಾಸ ಮತಯಾಚನೆ ಎಂಬುದು ಸದನದಲ್ಲಿಯೇ ನಡೆಯಬೇಕು, ಮೈದಾನದಲ್ಲಿ ಅಲ್ಲ ಎಂದು ಸುಪ್ರೀಂಕೋರ್ಟ್ ಮಹತ್ವದ ಆದೇಶ ನೀಡಿ ನಿರ್ದೇನ ನೀಡಿತು. ಅದಾದ ಬಳಿಕ, ಯಾವುದೇ ಸರಕಾರಕ್ಕೆ ಬಹುಮತವಿಲ್ಲ ಎಂಬುದನ್ನು ರಾಜ್ಯಪಾಲರು ತಮ್ಮ ವಿವೇಚನೆ ಅನುಸಾರ ನಿರ್ಧರಿಸುತ್ತಿಲ್ಲ. ಹಾಗಾಗಿ, ಕರ್ನಾಟಕದ ಸಂದರ್ಭದಲ್ಲೂ ರಾಜ್ಯಪಾಲರು ಸದನದೊಳಗೆ ವಿಶ್ವಾಸ ಮತಯಾಚಿಸಲು ನಿರ್ದೇಶನ ನೀಡಿದ್ದಾರೆ. ಸಮಯದ ಗಡುವನ್ನೂ ವಿಧಿಸಿದ್ದಾರೆ. ಅವರು ಸಾಂವಿಧಾನಿಕ ಹಾಗೂ ಕಾರ್ಯಾಂಗದ ಮುಖ್ಯಸ್ಥ. ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ರಾಜ್ಯಪಾಲರ ಮಾತನ್ನು ಪಾಲಿಸಲೇಬೇಕಾಗುತ್ತದೆ. ಇಲ್ಲದಿದ್ದರೆ ಈ ಸರಕಾರದ ನಡಾವಳಿಗಳ ಕುರಿತು ರಾಜ್ಯಪಾಲರು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬಹುದು.

(ಲೇಖಕರು ಸುಪ್ರೀಂ ಕೋರ್ಟ್ ವಕೀಲರು)